Karnatak Law Society's
**Vishwanathrao Deshpande Institute of Technology**
**(Approved by AICTE, New Delhi. Affiliated to VTU, Belagavi)**
**(Recognised Under Section 2(f) by UGC, New Delhi)**
**Udyog Vidya Nagar, Haliyal – 581329, Dist: Uttar Kannada (Karnataka)**
**Phone: 08284-220861, 220334, 221409, Fax: 08284-220813**
**www.klsvdit.edu.in** **principal@klsvdit.edu.in**

Date: 05-11-2022

**ಪತ್ರಿಕಾ ಪ್ರಕಟಣೆ:**

# ಕಬಡ್ಡಿ ಪಂದ್ಯಾವಳಿಯಲ್ಲಿ ವಿ. ಡಿ. ಐ. ಟಿ. ವಿದ್ಯಾರ್ಥಿಗಳು ದ್ವಿತೀಯ

ಕೆ. ಎಲ್. ಎಸ್. ವಿ. ಡಿ. ಐ. ಟಿ. ಹಳಿಯಾಳದ ವಿದ್ಯಾರ್ಥಿಗಳು ವಿ. ತಾ. ವಿ. ಬೆಳಗಾವಿಯ ವಿಭಾಗ ಮಟ್ಟದ ಅಂತರ ಕಾಲೇಜುಗಳ ಪುರುಷರ ಕಬ್ಬಡ್ಡಿ ಪಂದ್ಯಾವಳಿಯಲ್ಲಿ ದ್ವಿತೀಯ ಸ್ಥಾನ ಪಡೆದುಕೊಂಡಿದೆ. ಬೆಳಗಾವಿಯ ಅಂಗಡಿ ತಾಂತ್ರಿಕ ಮಹಾವಿದ್ಯಾಲಯದಲ್ಲಿ ನವೆಂಬರ್ 4 ಮತ್ತು 5ರಂದು ಆಯೋಜಿಸಿದ್ದ ಪಂದ್ಯಾವಳಿಯಲ್ಲಿ ಮಹಾವಿದ್ಯಾಲಯದ ವಿದ್ಯಾರ್ಥಿಗಳು ಈ ಸಾಧನೆಗೈದಿದ್ದಾರೆ. ಬೆಳಗಾವಿ ವಿಭಾಗದ 18 ತಾಂತ್ರಿಕ ಮಹಾವಿದ್ಯಾಲಯದ ತಂಡಗಳು ಸ್ಪರ್ಧಿಸಿದ್ದ ಈ ಪಂದ್ಯಾವಳಿಯಲ್ಲಿ, ವಿ. ಡಿ. ಐ. ಟಿ. ವಿದ್ಯಾರ್ಥಿಗಳು ದ್ವಿತೀಯ ಸ್ಥಾನ ಗಳಿಸಿ ಮಹಾವಿದ್ಯಾಲಯಕ್ಕೆ ಕೀರ್ತಿ ತಂದಿದ್ದಾರೆ.ಕು. ಮಂಜುನಾಥ ಎಂ,ಕು. ಕಿರಣ್ ಎನ್, ಕು. ಗುರುಬಸಯ್ಯ ಹೆಚ್,ಕು.ತಾನಾಜಿ ಬಿ ,ಕು.ಅಭಿಲಾಷ್ ಡಿ. ಕು. ಮಯೂರ ಪಿ, ಕು. ತಾನಾಜಿ ಎಂ, ಕು. ತುಷಾರ್ ಜೆ, ಕು. ಸಾಂಭಾಜಿ ಪಿ, ಕು. ದಿಲೀಪ್ ಕೆ, ಕು. ಶ್ರೀನಿವಾಸ್ ಪಿ, ಕು. ರಘುನಾಥ ಡಿ ಇವರುಗಳು ದೈಹಿಕ ನಿರ್ದೇಶಕರಾದ ಶ್ರೀ. ಗದಿಗೆಪ್ಪ ಯಳ್ಳೂರ್ ಅವರ ಮಾರ್ಗದರ್ಶನದಲ್ಲಿ ಈ ಸಾಧನೆಗೈದಿದ್ದಾರೆ. ನವೆಂಬರ್ 8 ಮತ್ತು 9ರಂದು ತುಮಕೂರು ಜಿಲ್ಲೆಯ ಗುಬ್ಬಿಯಲ್ಲಿರುವ ಸಿ. ಐ. ಟಿ. ಮಹಾವಿದ್ಯಾಲಯದಲ್ಲಿ ನಡೆಯಲಿರುವ ರಾಜ್ಯಮಟ್ಟದ ಕಬ್ಬಡ್ಡಿ ಸ್ಪರ್ಧೆಯಲ್ಲಿ ಈ ತಂಡವು ಮಹಾವಿದ್ಯಾಲಯವನ್ನು ಪ್ರತಿನಿಧಿಸಲಿದೆ. ವಿದ್ಯಾರ್ಥಿಗಳ ಈ ಸಾಧನೆಗೆ ಆಡಳಿತ ಮಂಡಳಿಯ ಅಧ್ಯಕ್ಷರಾದ ಶ್ರೀ. ವಿನಾಯಕ ಲೋಕುರ್, ಪ್ರಾಚಾರ್ಯರಾದ ಡಾ. ವಿ. ಎ. ಕುಲಕರ್ಣಿ ಹಾಗೂ ಎಲ್ಲಾ ಬೋಧಕ ಬೋಧಕೇತರ ಸಿಬ್ಬಂದಿಗಳು ಅಭಿನಂದಿಸಿ ಶುಭ ಹಾರೈಸಿದ್ದಾರೆ.

ಪ್ರಾಂಶುಪಾಲರು

**Principal**
**KLS Vishwanathrao Deshpande Institute of Technology, Haliyal**

